**ಅಸಲು ದಾವಾ ನಂಃ126/2022**
**ಪಿ.ಡಬ್ಲ್ಯೂ: 01**

**ದಿನಾಂಕಃ 11-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ.ಎಸ್.ಜೆ., ಪ್ರತಿವಾದಿ ಪರ ವಕೀಲರಿಂದ**

ನನ್ನ ತಂದೆಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು. ಸದರಿ ಹೆಣ್ಣು ಮಗಳ ಹೆಸರು ಅಮೃತವೇಣಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ನನ್ನ ತಂದೆಯ ತಂದೆ ಹೆಸರು ಈರಪ್ಪ. ಈರಪ್ಪನಿಗೆ ಒಟ್ಟು 4 ಜನ ಅಣ್ಣ ತಮ್ಮಂದಿರು ಎಂದರೆ ಸರಿ. ಮೊದಲನೆಯವರು ಈರಪ್ಪ, ಎರಡನೇಯವರು ನಿಂಗಪ್ಪ, ಮೂರನೇಯವರು ಆದೇಪ್ಪ, ನಾಲ್ಕನೇಯವರು ತೊಗರಿ ಹನುಮಪ್ಪ ಎಂದರೆ ಸರಿ. ಈರಪ್ಪರವರ ಅಪ್ಪ ಅಂದರೆ ನನ್ನ ಮುತ್ತಾತ ಸಣ್ಣ ದುರುಗಪ್ಪ.

ಸಣ್ಣ ದುರುಗಪ್ಪರವರಿಗೆ ಸರ್ವೇ ನಂ.24 ರಲ್ಲಿ ಕ್ಷೇತ್ರ 13 ಎಕರೆ 8 ಗುಂಟೆ ಜಮೀನು ಸಾಗುವಳಿ ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು 3 ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿಯ ತಂದೆ ತಿಮ್ಮಪ್ಪನಿಗೆ 4 ಎಕರೆ 24 ಗುಂಟೆ ಜಮೀನು ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ 4 ಎಕರೆ 24 ಗುಂಟೆಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. 4 ಎಕರೆ 24 ಗುಂಟೆ ಜಮೀನನ್ನು ಬೀಳು ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಸಣ್ಣ ದುರುಗಪ್ಪನಿಗೆ 3 ಜನ ಅಣ್ಣಂದಿರು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 4 ಜನ ಅಣ್ಣ ತಮ್ಮಂದಿರಲ್ಲಿ ಮೊದಲನೆಯವರು ಮಂಡಿ ತಿಮ್ಮಪ್ಪ ಎಂದರೆ ಸರಿ. ಎರಡನೇಯವರು ವಾಲೆಕಾರ ನಿಂಗಪ್ಪ ಎಂದರೆ ಸರಿ. ಮೂರನೇಯವರು ಅಲ್ಲು ದುರುಗಪ್ಪ ಎಂದರೆ ಸರಿ.

ಮಂಡಿ ತಿಮ್ಮಪ್ಪನಿಗೆ 4 ಜನ ಮಕ್ಕಳು ಎಂದರೆ ಸರಿ. ಅವರಲ್ಲಿ ಪ್ರತಿವಾದಿಯರ ತಾತ ಆದೆಪ್ಪ ಒಂದನೇ ಮಗ ಎಂದರೆ ಸರಿ. ಸದರಿ ಆದೆಪ್ಪನಿಗೆ ಒಟ್ಟು 4 ಜನ ಮಕ್ಕಳಿದ್ದು, ಒಂದನೇ ತಿಮ್ಮಪ್ಪ, ಎರಡನೇಯವರು ಹನುಮಪ್ಪ, ಮೂರನೇಯವರು ನಿಂಗಪ್ಪ, ನಾಲ್ಕನೇಯವರು ಆದೆಪ್ಪ ಎಂದರೆ ಸರಿ. ಸದರಿ ಒಂದನೇ ತಿಮ್ಮಪ್ಪನ ಮಕ್ಕಳೇ ಮೂರು ಜನ ಪ್ರತಿವಾದಿಯರು ಎಂದರೆ ಸರಿ.

ದಾವಾ ಷೆಡ್ಯೂಲ್ ನ ಐಟಂ ನಂ.1 ಪ್ರತಿವಾದಿಯರ ಭಾಗಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ಹಾಲಿ ಪ್ರತಿವಾದಿಯರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾವು ಜಂಟಿ ಸ್ವಾಧೀನಾನುಭವದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ಐಟಂ ನಂ.1 ನ್ನು

ಪ್ರತಿವಾದಿಯರ ತಂದೆ ತಿಮ್ಮಪ್ಪ ಹಾಗೂ ನಮ್ಮ ತಾತ ಈರಪ್ಪರವರು ಜಂಟಿಯಾಗಿ ಖರೀದಿಸಿರುತ್ತಾರೆ. ಸದರಿ ವಿಷಯವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಹಳ ಹಿಂದಿನಿಂದಲೂ ಕಂದಾಯ ದಾಖಲೆಗಳು ಪ್ರತಿವಾದಿಯರ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನ ಐಟಂ ನಂ.1 ನ್ನು ಪ್ರತಿವಾದಿಯರು ಮಾತ್ರ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ವೇದಾವತಿ ನದಿಯ ದಡದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಜಮೀನು ನೀರಾವರಿ ಜಮೀನಾಗಿದ್ದು ಫಲವತ್ತಾಗಿರುತ್ತದೆ ಎಂದರೆ ಸರಿ.

2015 ರ ಪಹಣಿಯಲ್ಲಿ ನಮ್ಮ ಹೆಸರು ಜಂಟಿಯಾಗಿ ಬರುತ್ತಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2015 ರಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಷರೀಕಾಗಿ ಪ್ರತಿವಾದಿಯರಿಗೆ ತಿಳಿಯದಂತೆ ಪಹಣಿಯಲ್ಲಿ ನಮ್ಮ ಹೆಸರು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಹಾಲಿ ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನ ಐಟಂ ನಂ.1 ರಲ್ಲಿ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆಯವರು ದಾವಾ ಷೆಡ್ಯೂಲ್ ನ ಐಟಂ ನಂ.2 ರಲ್ಲಿ ಪ್ರತಿವಾದಿಯರಿಗೆ 4 ಎಕರೆ 24 ಗುಂಟೆ ಭಾಗ ಮಾಡಿಕೊಡಲು ಸಿದ್ದರಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರಿಗೆ ಯಾವುದೇ ಭಾಗ ಬರುವುದಿಲ್ಲ ಎಂದು ನುಡಿಯುತ್ತಾರೆ.

ಎದುರು ದಾವಾ ಸ್ವತ್ತು ಸಣ್ಣ ದುರುಗಪ್ಪ, ಮೂಡೇ ಹನುಮಪ್ಪ ಮತ್ತು ದಾಸಪ್ಪ ರವರಿಗೆ ದರಕಾಸ್ತ್ ಮೂಲಕ ಬಂದಿರುತ್ತದೆ ಎಂದರೆ ಸರಿ. ಪ್ರಾಥಮಿಕ ದಾಖಲೆಯು ಅವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಮೂಲ ದಾಖಲೆಯಲ್ಲಿ ಸಣ್ಣ ದುರುಗಪ್ಪರವರಿಗೆ 4 ಎಕರೆ 24 ಗುಂಟೆ ಇರುತ್ತದೆ ಎಂದರೆ ಸರಿ. ಉಳಿದ 7 ಎಕರೆ 19 ಗುಂಟೆ ಜಮೀನು ದಾಸಪ್ಪ, ಮಂಡಿ ತಿಮ್ಮಪ್ಪ, ಸಣ್ಣತಿಮ್ಮಪ್ಪ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಪ್ರತಿವಾದಿಯ ತಂದೆ ತಿಮ್ಮಪ್ಪರವರ ತಾತ ಮಂಡಿ ತಿಮ್ಮಪ್ಪ ಎಂದರೆ ಸರಿ. ಸದರಿ ದಾಸಪ್ಪ, ಮಂಡಿ ತಿಮ್ಮಪ್ಪ, ಸಣ್ಣತಿಮ್ಮಪ್ಪರವರು 3 ಭಾಗ ಮಾಡಿಕೊಂಡು ಪ್ರತಿವಾದಿಯರ ಭಾಗಕ್ಕೆ 4 ಎಕರೆ 24 ಗುಂಟೆ ಜಮೀನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಮೂಲ ವಾರಸುದಾರರು ಎಲ್ಲರು ಮೃತರಾಗಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ಹಂಚಿಕೆ ಮಾಡಲು ನಾವು ಸಹಕಾರ ನೀಡುತ್ತಿಲ್ಲ ಎಂದರೆ ಸುಳ್ಳು.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.